ನಿ - 72
ಕ್ರ - 35
146ನೇ ಅಧಿವೇಶನ
ರಂಗಸ್ವಾಮಿ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಯು.ಬಿ. ವೆಂಕಟೇಶ್ ರವರ ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ:

**ವಿಷಯ: ಮೃತ ಕೊರೊನಾ ವಾರಿಯರ್ಸ್‌ಗಳಿಗೆ ನೀಡಿರುವ ಪರಿಹಾರ ಮೊತ್ತ ಹಾಗೂ ಇತರೆ ಸೌಲಭ್ಯಗಳ ಕುರಿತು.**

ಸರ್ಕಾರದ ಹೇಳಿಕೆ:

ಕೊರೋನಾ ಸೇವೆಗೆ ನಿಯೋಜನೆಗೊಂಡಿರುವ ಕೋವಿಡ್ ವಾರಿಯರ್ಸ್ ಗಳು ಕೋವಿಡ್ ಸೋಂಕಿಗೆ ಒಳಗಾಗಿ ಮೃತ ಹೊಂದಿದ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿಯಲ್ಲಿ ರೂ.50.00ಲಕ್ಷಗಳನ್ನು ಘೋಷಣೆ ಮಾಡಿದೆ ಹಾಗೂ ದಿನಾಂಕ:07.08.2020ರ ಸರ್ಕಾರದ ಆದೇಶ ಸಂಖ್ಯೆ:ಆಇ 190 ವೆಚ್ಚ-11/2020ರನ್ವಯ ಕೋವಿಡ್-19ರಿಂದ ಮೃತರಾದ ಕೊರೋನಾ ವಾರಿಯರ್ಸ್ ಗಳಿಗೆ ರಾಜ್ಯ ಸರ್ಕಾರದಿಂದ ರೂ.30.00ಲಕ್ಷಗಳ ಪರಿಹಾರ ನೀಡಲಾಗುತ್ತಿದೆ.

ಎಲ್ಲಾ ಇಲಾಖೆಯ ಎಲ್ಲಾ ವೃಂದದ ಸರ್ಕಾರಿ ನೌಕರರು ಕೋವಿಡ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಲ್ಲಿ ಹಾಗೂ ಕೋವಿಡ್ ಸೋಂಕಿನಿಂದ ಮೃತಪಟ್ಟಲ್ಲಿ ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

ಸಂಖ್ಯೆ: ಆಇ 24 ವೆಚ್ಚ-5/2022

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿಗಳು